'ಜಂಬೂ ಸವಾರಿಯಲ್ಲಿ ರಾಜಯೋಗಿ ಅಣ್ಣಯ್ಯ' ಮನಸಿನಲ್ಲೇ ಈ ಫೋಟೊದ ಶೀರ್ಷಿಕೆ ಮಾಡಿಟ್ಟುಕೊಂಡು ಮತ್ತೆ ಮುಂದಕ್ಕೆ ಸಾಗುತ್ತೇನೆ. ಮಹಾನುಭಾವರಾದ ಸಂಪಾದಕ ಮಹಾಶಯರುಗಳು ಹಾಳಾದ ಮಂತ್ರಿ ಮಹೋದಯರುಗಳ ಫೋಟೊಗಳನ್ನಷ್ಟೇ ಮಾರನೆಯ ದಿನ ದೊಡ್ಡದಾಗಿ ಅಚ್ಚು ಮಾಡಿರುತ್ತಾರೆ. 'ಎಲ್ಲಿ ಸಾ ನನ್ನ ಫೋಟೊ ಬಂದೇ ಇಲ್ಲ' ಅಣ್ಣಯ್ಯ ಪ್ರತಿ ಸಲವೂ ತಲೆ ಕೆರೆದುಕೊಳ್ಳುತ್ತಾ ಗೊಣಗುತ್ತಾನೆ.

'ನಿನ್ನ ಪೇಪರಲ್ಲಿ ಸ್ಪೆಷಲ್ ಕಾವಡಿ ಅಣ್ಣಯ್ಯನ ಫೋಟೊ ಬಂದ ದಿನ ರೈಲಿನಡಿ ತಲೆಕೊಟ್ಟು ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ' ಎಂದು ಚಾ ಮಾರುವ ಮಲಯಾಳಿ ಮಾದೇವಣ್ಣ ಸವಾಲು ಹಾಕಿದವರು ಮೇಲಕ್ಕೆ ಹೋಗಿ ಇಪ್ಪತ್ತು ದಿನದಲ್ಲಿ ಎರಡನೆಯ ದಸರಾ ಕೂಡಾ ಮುಗಿದು ಹೋಗುತ್ತದೆ.

ಇದೀಗ ಅಣ್ಣಯ್ಯ ಮತ್ತೆ ಅದೇ ಪ್ರಶ್ನೆ ಕೇಳುತ್ತಾನೆ: 'ಸಾ ಮಾದೇವಣ್ಣ ಬಂದ್ರಾ ಸಾ? ಅಂದುಕೊಂಡಂತೆ ಅಣ್ಣಯ್ಯ ಅದೇ ಪ್ರಶ್ನೆ ಕೇಳಿದ. ಆದರೆ ತಿರುಗಾ ಮುರುಗಾ. 'ಸಾ ಮಾದೇವಣ್ಣ ಹೋಗೇ ಬಿಟ್ರಾ ಸಾ' ಹೋಗಿರಲಿಕ್ಕಿಲ್ಲ. ಬರಬಹುದು ಅಣ್ಣಯ್ಯ' ನಾನು ಸುಳ್ಳು ಹೇಳುತ್ತೇನೆ. 'ಇಲ್ಲಾ ಸಾರ್ ಅವರು ಬರೋದು ಡೌಟು' ಅಣ್ಣಯ್ಯ ಆಕಾಶಕ್ಕೆ ತಲೆ ಎತ್ತಿ ಏನೋ ಪರಿಮಳ ಹಿಡಿದುಕೊಂಡು ಹೇಳುತ್ತಾನೆ. 'ಸಾ ಅವರು ಮೇಲೆ ಹೋಗಿರಬಹುದು. ಅವರ ಬಾಡಿ ಆಸ್ಪತ್ರೆಗೆ ಕೊಟ್ಟೂ ಆಗಿರಬಹುದು'ಆನೆಯಲದ್ದಿಕೈಯ್ಯಲ್ಲಿಹಿಡಿದುಕೊಂಡೇ ಕಾಲಜ್ಞಾನಿಯಂತೆ ಅಣ್ಣಯ್ಯ ನುಡಿಯುತ್ತಾನೆ. 'ಅದೂ ಆಗಿರಬಹುದು .ಇಲ್ಲದೆಯೂ ಇರಬಹುದು' ನಾನು ಅರ್ಧ ಸತ್ಯ ಅರ್ಧ ಸುಳ್ಳು ಹೇಳುತ್ತೇನೆ. 'ಸಾ ಹಾಗಾದರೆ ಕಾಡಿನಲ್ಲಿ ನಮಗೆ ಮನೆ' ಅಣ್ಣಯ್ಯ ಕಣ್ಣಿನಲ್ಲಿ ಆಸೆ ತುಂಬಿಕೊಂಡು ಕೇಳುತ್ತಾನೆ. 'ಇರು ನೋಡಣ' ನಾನು ತಲೆಯ ಮೇಲೆ ಹೆಲ್ಮೆಟ್ಟು ಎಳೆದುಕೊಂಡು ಮುಂದಕ್ಕೆ ಹೋಗುತ್ತೇನೆ. ಮತ್ತೆ ಅದೇ ರಾಡಿ ಮಳೆ ಪಟ್ಟದಾನೆಗಳ ಲದ್ದಿಯ ಅನೂಹ್ಯ ಪರಿಮಳ.

'ಮಳೆಗಾಲವು ಕಳೆದು, ಕಪ್ಪಗಿನ ಮೋಡಗಳು ಬಿಳುಪಾಗಿ, ಹಗಲು ಆಗಸದಲ್ಲಿ ದಿನಮಣಿ ಸೂರ್ಯನ ಬೆಳಕು ಬೆಳಗಿ, ಇರುಳ ಆಗಸದಲ್ಲಿ ಚಂದಿರನ ಹೊಳಪು ಮಿನುಗಿ, ಉಕ್ಕಿದ್ದ ನದಿಗಳು ಶಾಂತವಾಗಿ, ಆಕಾಶ ಮಾರ್ಗದಲ್ಲಿ ಹಂಸಗಳು ಹಾರಿ ಬಂದು, ಕೊಳದಲ್ಲಿ ತಾವರೆಗಳು ಅರಳಿ, ತಲೆಯ ಮೇಲೆ ಅರಳೆಹತ್ತಿ ಗಳಂತಹ ತೆಳು ಮೋಡಗಳು ತೇಲಿ, ಮೈಸೂರಿನ ಮಹಾರಾಜರು ಯುದ್ಧಕ್ಕೆ ಹೋಗಿದ್ದವರು ಶಹರಿಗೆ ಮರಳಿ ವಿಜಯೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲು ಸಿದ್ಧರಾಗುತ್ತಿದ್ದ ಕಾಲ.'

ಸೌಭಾಗ್ಯಲಕ್ಷ್ಮಿ ಮೇಡಂ ಷಟ್ಪದಿ ಸಾಲುಗಳು ಮತ್ತೆ ಬಂದು ಮೂಗಿನ ತುದಿಯಲ್ಲಿ ಕುಳಿತುಕೊಂಡು ಗುನುಗ ತೊಡಗಿದವು.

* * *

ಸರಿ ಸುಮಾರು ಕಾಲು ಶತಮಾನದ ಹಿಂದೆ ಇರಬೇಕು ಚಾ ಮಾರುವ ಮಲಯಾಳಿ ಮಾದೇವಣ್ಣನನ್ನು ನಾನು ನೋಡಿದ್ದು. ದೇವರಾಜ ಮಾರುಕಟ್ಟೆಯ ಹಿಂದೆ ಚಾಕಣ ಮಾರುವ ಮಾಪಿಳ್ಳೆ ಹೋಟೆಲಿನ ಮುಂದೆ ಝಗಮಗಿಸುವ ಗ್ಯಾಸ್ ಲೈಟಿನ ಬೆಳಕಲ್ಲಿ ಸೀಮೆಣ್ಣೆ ಸ್ಟೌ ಹೊತ್ತಿಸಿಕೊಂಡು ಬಿಳಿ ದಿರಿಸಿನ ಮಹಾನುಭಾವನ ಹಾಗೆ ಮಲಯಾಳಿ ಮಾದೇವಣ್ಣ ನಿಂತಿದ್ದರು. ಆಗ ಅವರ ಹೆಸರು ಮಾದೇವಣ್ಣ ಆಗಿರಲಿಲ್ಲ. ಮಾಧವನ್ ನಾಯರ್. ಬೆಂಗಳೂರಲ್ಲಿ ಸಾಯಬೇಕೆಂದು ಪುಟ್ಟಪರ್ತಿಯಿಂದ ರೇಲು ಹಿಡಿದುಕೊಂಡು ಬಂದವರು ಬೆಂಗಳೂರಲ್ಲಿ ಸಾಯುವುದು ಬೇಡವೆಂದು ಮೈಸೂರಿಗೆ ಬರುವ ಟೀಪೂ ಎಕ್ಸ್‌ಪ್ರೆಸ್ ಹತ್ತಿದ್ದರು. ಟೀಪೂ ಎಕ್ಸ್‌ಪ್ರೆಸ್ಸಿನಲ್ಲಿ ಪರಕಾಲಮಠದ ಮರಿಸ್ವಾಮಿಗಳೊಬ್ಬರು ಕುಳಿತಿದ್ದರಂತೆ. ನದಿಯ ಮೇಲೆ ರೇಲು ಹೋಗುತ್ತಿದ್ದಾಗಲೆಲ್ಲ ನೀರಿಗೆ ಹಾರಲಾಗದೆ ವಾಪಾಸು ಬಂದು ಕುಳಿತು ಕೊಳ್ಳುತ್ತಿದ್ದ ಮಾಧವನ್ ನಾಯರ್‌ರನ್ನು ಹತ್ತಿರ ಕುಳ್ಳಿರಿಸಿ ಆತ್ಮಹತ್ಯೆಯು ತಪ್ಪು. ಏಕೆಂದರೆ ಪ್ರತಿ ಆತ್ಮದಲ್ಲೂ ದೈವತ್ವ ಅಡಗಿರುತ್ತದೆ ಮತ್ತು ಆತ್ಮವನ್ನು ಕೊಲ್ಲುವುದು ದೈವದ್ರೋಹದಂತೆ ಎಂದು ಅವರನ್ನು ಒಲಿಸಿ ಮೈಸೂರು ರೈಲು ನಿಲ್ದಾಣದಲ್ಲಿ ಇಳಿಸಿ ತಾವೂ ಇಳಿದು ಮಾಯವಾದರಂತೆ.

ಮಾಧವನ್ ನಾಯರ್ ಅವರನ್ನು ನಾನು ಮೊದಲು ನೋಡಿದಾಗ ಅವರು ಮಾದೇವಣ್ಣ ಆಗಿರಲಿಲ್ಲ. ಬೆಳ್ಳಗಿನ ಶರಟು ಮುಂಡು ಧರಿಸಿ, ಹಣೆಗೆ ಚಂದನವಿಟ್ಟು. ತಮ್ಮ ಉದ್ದದ ಗುಂಗುರು ತಲೆಕೂದಲಿಗೆ ನಾರೀಕೇಳದ ತೈಲ ಹಚ್ಚಿಕೊಂಡು